ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 : ಮೇ 18, 2015

# ಮಾಧ್ಯಮದವರ ಗಮನಕ್ಕೆ

ಘನತೆವೆತ್ತ ಉಪರಾಷ್ಟ್ರಪತಿಗಳಾದ ಶ್ರೀ ಮೊಹಮ್ಮದ್ ಹಮೀದ್ ಅನ್ಸಾರಿ ಅವರ ಬೆಂಗಳೂರು ಭೇಟಿ ಪ್ರಯುಕ್ತ ಕಾರ್ಯಕ್ರಮಗಳನ್ನು ವರದಿ ಮಾಡಲು ಮಾಧ್ಯಮ ಪ್ರತಿನಿಧಿಗಳಿಗೆ ರಹದಾರಿ ಪತ್ರ ವಿತರಿಸಲು ಮಾನ್ಯತೆ ಪಡೆದ ಪತ್ರಕರ್ತರ ಪಟ್ಟಿಯನ್ನು ಬೆಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿಗೆ ಕಳುಹಿಸಿಕೊಡಲಾಗಿದೆ.

ಮಾನ್ಯತೆ ಹೊಂದಿರುವ ಮಾಧ್ಯಮ ಪ್ರತಿನಿಧಿಗಳು ತಮ್ಮ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳೊಂದಿಗೆ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ರಹದಾರಿ ಪತ್ರಗಳನ್ನು ಪಡೆದುಕೊಳ್ಳಬಹುದು.

**ದಿನಾಂಕ:19–05–2015ರಂದು ಕೆರೆ ಒತ್ತುವರಿ ಸದನ ಸಮಿತಿಯು ವೀಕ್ಷಿಸುವ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆರೆಗಳ ಕಾರ್ಯಕ್ರಮ ಪಟ್ಟಿ**

| | |
|---|---|
| ಬೆಳಿಗ್ಗೆ: 08.30 ಗಂಟೆಗೆ | ಶಾಸಕರ ಭವನದಲ್ಲಿ ಸಭೆ ಸೇರಿ ಹೊರಡುವುದು |
| ಬೆಳಿಗ್ಗೆ: 09.00 ಗಂಟೆಗೆ<br><br><br>ಬೆಳಿಗ್ಗೆ: 09.30 ಗಂಟೆಗೆ | 1. ಕೆಂಪಾಂಬುಧಿ ಕೆರೆಯ ವೀಕ್ಷಣೆಗೆ ಹೊರಡುವುದು.<br>ಚಾಮರಾಜಪೇಟೆ ಮೂಲಕ (ಅರ್ಧಗಂಟೆ ದಾರಿ)<br>ಕೆರೆಯ ಪರಿಶೀಲನೆ (ಅರ್ಧ ಗಂಟೆ) |
| ಬೆಳಿಗ್ಗೆ: 10.00 ಗಂಟೆಗೆ | 2. ಯಡಿಯೂರು ಕೆರೆಯ ವೀಕ್ಷಣೆಗೆ ಹೊರಡುವುದು.<br>(ಅರ್ಧ ಗಂಟೆ ದಾರಿ) |

| | |
|---|---|
| ಬೆಳಿಗ್ಗೆ: 10.30 ಗಂಟೆಗೆ | ರಾಮಕೃಷ್ಣ ಆಶ್ರಮ, ಕೆ.ಆರ್.ರಸ್ತೆ ಮೂಲಕ ಸೌತ್ ಎಂಡ್ ವೃತ್ತ<br>ಕೆರೆಯ ಪರಿಶೀಲನೆ (ಅರ್ಧ ಗಂಟೆ) |
| ಬೆಳಿಗ್ಗೆ: 11.00 ಗಂಟೆಗೆ<br><br>ಬೆಳಿಗ್ಗೆ: 11.45 ಗಂಟೆಗೆ | 3. ಅರಕೆರೆಯ ವೀಕ್ಷಣೆಗೆ ಹೊರಡುವುದು.<br>ಬನ್ನೇರುಘಟ್ಟ ರಸ್ತೆ IIM ಮೂಲಕ 45 ನಿಮಿಷಗಳ ದಾರಿ<br>ಅರಕೆರೆಯ ಪರಿಶೀಲನೆ. |
| ಮಧ್ಯಾಹ್ನ: 12.15 ಗಂಟೆಗೆ<br><br>ಮಧ್ಯಾಹ್ನ: 12.30 ಗಂಟೆಗೆ | 4. ದೊರೆಸಾನಿಪಾಳ್ಯ ಕೆರೆಯ ವೀಕ್ಷಣೆಗೆ ಹೊರಡುವುದು.<br>(15 ನಿಮಿಷಗಳ ದಾರಿ ದಾಲ್ಮಿಯಾ ವೃತ್ತದ ಮೂಲಕ)<br>ದೊರೆಸಾನಿಪಾಳ್ಯ ಕೆರೆ ಪರಿಶೀಲನೆ |
| ಮಧ್ಯಾಹ್ನ: 01.15 ಗಂಟೆಗೆ<br>ಮಧ್ಯಾಹ್ನ: 01.30 ಗಂಟೆಗೆ | 5. ಪುಟ್ಟೇನಹಳ್ಳಿ ಕೆರೆಯ ವೀಕ್ಷಣೆಗೆ ಹೊರಡುವುದು.<br>ಪುಟ್ಟೇನಹಳ್ಳಿ ಕೆರೆ ಪರಿಶೀಲನೆ. |
| ಮಧ್ಯಾಹ್ನ: 02.00 ಗಂಟೆಗೆ | ಭೋಜನ ವಿರಾಮ |
| ಮಧ್ಯಾಹ್ನ: 03.30 ಗಂಟೆಗೆ | 6. ದೊರೆಕೆರೆ ಕೆರೆಯ ವೀಕ್ಷಣೆಗೆ ಹೊರಡುವುದು.<br>(ಉತ್ತರಹಳ್ಳಿ ಮುಖ್ಯರಸ್ತೆ ಮೂಲಕ)<br>ಕೆರೆ ಪರಿಶೀಲನೆ. |
| ಸಂಜೆ: 04.00 ಗಂಟೆಗೆ<br><br>ಸಂಜೆ: 04.10 ಗಂಟೆಗೆ | 7. ಚಿಕ್ಕಲಸಂದ್ರ ಕೆರೆಯ ವೀಕ್ಷಣೆಗೆ ಹೊರಡುವುದು.<br>(ಉತ್ತರಹಳ್ಳಿ ವೃತ್ತದ ಮೂಲಕ 10 ನಿಮಿಷ)<br>ಕೆರೆಯ ಪರಿಶೀಲನೆ |
| ಸಂಜೆ: 04.30 ಗಂಟೆಗೆ | 8. ಇಟ್ಟುಮಡು ಕೆರೆಯ ವೀಕ್ಷಣೆಗೆ ಹೊರಡುವುದು.<br>ಹಾಗೂ ಇಟ್ಟಮಡು ಕೆರೆ ಪರಿಶೀಲನೆ |
| ಸಂಜೆ: 05.00 ಗಂಟೆಗೆ | 9. ಹಲಗೆವಡೇರಹಳ್ಳಿ ಕೆರೆಯ ವೀಕ್ಷಣೆಗೆ |

| | |
|---|---|
| ಸಂಜೆ: 05.30 ಗಂಟೆಗೆ | ಹೊರಡುವುದು.<br>ಕೆರೆಯ ಪರಿಶೀಲನೆ ನಂತರ ಶಾಸಕರ ಭವನಕ್ಕೆ ಹಿಂತಿರುಗುವುದು. |

## ವಿಧಾನಮಂಡಲದ ಸದನ ಸಮಿತಿ ಭೇಟಿ

**ಬೆಂಗಳೂರು, ಮೇ 18 (ಕರ್ನಾಟಕ ವಾರ್ತೆ)**

ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಕೆರೆಗಳ ಒತ್ತುವರಿ ಕುರಿತು ಸಮಗ್ರ ತನಿಖೆ ನಡೆಸಿ ಅವುಗಳ ಸಂರಕ್ಷಣೆ ಬಗ್ಗೆ ವರದಿ ಸಲ್ಲಿಸಲು ರಚಿಸಲಾದ ವಿಧಾನಮಂಡಲದ ಸದನ ಸಮಿತಿಯು ಮೇ 19 ಮತ್ತು 20 ರಂದು ಬೆಂಗಳೂರು ನಗರ ಜಿಲ್ಲೆಯಲ್ಲಿನ ಪ್ರಮುಖ ಕೆರೆಗಳ ಸ್ಥಳಗಳಿಗೆ ಭೇಟಿನೀಡಿ ಪರಿಶೀಲಿಸಲಿದೆ ಎಂದು ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿ ಅವರು ತಿಳಿಸಿದ್ದಾರೆ.

ಬಾಬು:ಜಿಪಿಆರ್.

## ವಿದ್ಯಾರ್ಥಿ ವೇತನ

**ಬೆಂಗಳೂರು, ಮೇ 18 (ಕರ್ನಾಟಕ ವಾರ್ತೆ)**

ಹಿಂದುಳಿದ ವರ್ಗಗಳ ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ರೂ 1.00 ಲಕ್ಷ ಹಾಗೂ ಪ್ರವರ್ಗ – 2ಎ, 3ಎ, 3ಬಿ ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ರೂ. 44,500/- ಕ್ಕಿಂತ ಕಡಿಮೆ ಆದಾಯ ಹೊಂದಿರುವ, 1 ರಿಂದ 10 ನೇ ತರಗತಿ ವಿದ್ಯಾರ್ಥಿಗಳಿಗೆ, ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು 2015-16 ನೇ ಸಾಲಿನಿಂದ ಆನ್‌ಲೈನ್ ಮೂಲಕ ವಿದ್ಯಾರ್ಥಿಗಳ /ಪೋಷಕರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳ ಪೋಷಕರು ಕಡ್ಡಾಯವಾಗಿ ವಿದ್ಯಾರ್ಥಿಯ/ವಿದ್ಯಾರ್ಥಿಯ ತಾಯಿಯ ಹೆಸರಿನಲ್ಲಿ ಜಂಟಿಯಾಗಿ/ತಾಯಿ ಇಲ್ಲದಿದ್ದಲ್ಲಿ ತಂದೆ/ಪೋಷಕರ ಹೆಸರಿನಲ್ಲಿ ಜಂಟಿಯಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬ್ಯಾಂಕ್ ಖಾತೆಯನ್ನು ತೆರೆದು, ಬ್ಯಾಂಕಿನ ಐ.ಎಫ್.ಎಸ್.ಸಿ. ಕೋಡ್ ಸಂಖ್ಯೆ ಮತ್ತು ಖಾತೆ ಸಂಖ್ಯೆ ಇರುವ, ಪಾಸ್ ಪುಸ್ತಕದ ಮೊದಲ ಪುಟದ ಜೆರಾಕ್ಸ್ ಪ್ರತಿ, ಆಧಾರ್ ಕಾರ್ಡ್ ಹೊಂದಿದ್ದಲ್ಲಿ ಜೆರಾಕ್ಸ್ ಪ್ರತಿ ಹಾಗೂ ವಿದ್ಯಾರ್ಥಿಯ/ಪೋಷಕರ ಜಾತಿ ಆದಾಯ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಶಾಲೆಗೆ ಪ್ರವೇಶ ಹೊಂದುವ ಸಮಯದಲ್ಲಿಯೇ ಆಯಾ ಶಾಲೆಯ ಮುಖ್ಯೋಪಾಧ್ಯಾಯರಿಗೆ ನೀಡಬೇಕು.

ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನೀಡಲಾಗುವ ನಮೂನೆಯಲ್ಲಿ ಸದರಿ ವಿವರಗಳನ್ನು ಭರ್ತಿಮಾಡಿ, ವಿದ್ಯಾರ್ಥಿಗಳಿಂದ ಪಡೆದ ಬ್ಯಾಂಕ್ ಖಾತೆ ಪುಸ್ತಕದ ಪ್ರತಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಪ್ರತಿ ಮತ್ತು ಆಧಾರ್ ಪತ್ರದ ಜೆರಾಕ್ಸ್ ಪ್ರತಿಗಳ, ಜಾತಿ

ಮತ್ತು ಆದಾಯ ಪ್ರಮಾಣ ಪತ್ರದ ಪ್ರತಿ ಮತ್ತು ಆಧಾರ್ ಪತ್ರದ ಜೆರಾಕ್ಸ್ ಪ್ರತಿಗಳ ದಾಖಲಾತಿಗಳೊಂದಿಗೆ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಲು ಸೂಚಿಸಿದೆ.

ಬಾಬು:ಜಿಪಿಆರ್.

# ಡಿಪ್ಲೋಮ ಪ್ರವೇಶಾತಿ

ಬೆಂಗಳೂರು, ಮೇ 18 (ಕರ್ನಾಟಕ ವಾರ್ತೆ)

ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಸರ್ಕಾರದ ಆದೇಶದಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದವತಿಯಿಂದ ತಾಂತ್ರಿಕ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ 2015–16 ನೇ ಸಾಲಿಗೆ ಪ್ರಥಮ ಡಿಪ್ಲೋಮಾ ಪ್ರವೇಶಾತಿಯನ್ನು ಆನ್‌ಲೈನ್ ನಾನ್–ಇಂಟರಾಕ್ಟೀವ್ ಕೌನ್ಸಲಿಂಗ್ (ಆನ್‌ಲೈನ್ ಆಪ್ಷನ್ ಎಂಟ್ರಿ) ಮೂಲಕ ನಡೆಸುವ ಕುರಿತಂತೆ 124 ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ದಾಖಲೆ ಪರಿಶೀಲನೆ ಹಾಗೂ ಆನ್‌ಲೈನ್ ಅರ್ಜಿ ಸಲ್ಲಿಕೆ/ಆಪ್ಷನ್ ಎಂಟ್ರಿ ಸಹಾಯಕ ಕೇಂದ್ರಗಳಲ್ಲಿ ಪೂರ್ಣಾವಧಿಯ ವಿವಿಧ ಇಂಜಿನಿಯರಿಂಗ್ ಮತ್ತು ನಾನ್ ಇಂಜಿನಿಯರಿಂಗ್ ಕೋರ್ಸ್‌ಗಳ ಪ್ರಥಮ ಡಿಪ್ಲೋಮಾದಲ್ಲಿ ವ್ಯಾಸಂಗ ಮಾಡಲು ಇಚ್ಛಿಸುವ ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿ ಒಟ್ಟಾರೆ ಶೇ 35 ಅಂಕಗಳನ್ನು ಪಡೆದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರವೇಶಕ್ಕೆ ಇರಬೇಕಾದ ಕನಿಷ್ಟ ವಿದ್ಯಾರ್ಹತೆ ಹಾಗೂ ಇತರೆ ಅರ್ಹತೆಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್ "ದಾಖಲೆ ಪರಿಶೀಲನೆ ಹಾಗೂ ಆನ್‌ಲೈನ್ ಅರ್ಜಿ ಸಲ್ಲಿಕೆ/ಆಪ್ಷನ್ ಎಂಟ್ರಿ ಸಹಾಯ ಕೇಂದ್ರಗಳಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ ಅರ್ಜಿಗಳನ್ನು ಮೇ 20 ರಿಂದ ಮೇ 30 ರವರೆಗೆ ಸರ್ಕಾರಿ ಅನುದಾನಿತ ಪಾಲಿಟೆಕ್ನಿಕ್‌ಗಳಿಂದ ಕಚೇರಿ ವೇಳೆಯಲ್ಲಿ ಸಲ್ಲಿಸಿ ಅರ್ಜಿ ಮತ್ತು ಮಾಹಿತಿ ಪುಸ್ತಕವನ್ನು ಪಡೆಯಬಹುದಾಗಿದೆ

ಭರ್ತಿಮಾಡಿದ ಅರ್ಜಿಗಳಣ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ದಾಖಲೆಗಳ ಪರಿಶೀಲನೆ ಮತ್ತು ಆನ್‌ಲೈನ್‌ನಲ್ಲಿ ಆಪ್ಷನ್ ಎಂಟ್ರಿ ದಾಖಲಿಸಲು ಸಂಬಂಧಿಸಿದ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್ "ದಾಖಲೆ ಪರಿಶೀಲನೆ ಹಾಗೂ ಆನ್‌ಲೈನ್ ಅರ್ಜಿ ಸಲ್ಲಿಕೆ/ಆಪ್ಷನ್ ಎಂಟ್ರಿ ಸಹಾಯ ಕೇಂದ್ರಗಳಲ್ಲಿ ಮೇ 30 ರ ಸಂಜೆ 5–30 ರ ಒಳಗೆ ಎಲ್ಲಾ ಮೂಲ ದಾಖಲೆಗಳೊಂದಿಗೆ ಮತ್ತು ಒಂದು ಸೆಟ್ ಧೃಡೀಕೃತ ಜೆರಾಕ್ಸ್ ಪ್ರತಿಗಳು ಹಾಗೂ 3 ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಸಲ್ಲಿಸಲು ಕೋರಿದೆ.

ಬಾಬು:ಜಿಪಿಆರ್.